ಅ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಜಾರಿಗೆ ತರಲಾಗಿದೆ. ವಿವರಗಳು ಕೆಳಕಂಡಂತಿವೆ.

1. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯದ ವೃಂದ ಮತ್ತು ನೇಮಕಾತಿ . ನಿಯಮಗಳು : 44 ಹುದ್ದೆಗಳಿಗೆ.
2. ಕರ್ನಾಟಕ ವೈದ್ಯಕೀಯ ಸೇವೆಗಳು ವೃಂದ ಮತ್ತು ನೇಮಕಾತಿ . ನಿಯಮಗಳು : 80 ಹುದ್ದೆಗಳಿಗೆ.
3. ಕರ್ನಾಟಕ ಜನಾರೋಗ್ಯ ಸೇವೆಗಳ ನೇಮಕಾತಿ ನಿಯಮಗಳು : 71 ಹುದ್ದೆಗಳಿಗೆ ಕಾರ್ಯಪಾಲನಾ ಆದೇಶಗಳು (ಎಕ್ಸಿಕ್ಯೂಟಿವ್) - 33 ಹುದ್ದೆಗಳು. (ಜಾರಿಯಲ್ಲಿರುವ ನಿಯಮಗಳ ಪ್ರತಿಯನ್ನು ಮಾನ್ಯ ಸದಸ್ಯರಿಗೆ ಮಾತ್ರ ನೀಡಲಾಗುವುದು)

ಆ) ಉಳಿದ 49 ಹುದ್ದೆಗಳಿಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀಮತಿ ಮೋಟಮ್ಮ : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಜಾರಿಗೆ ತರಲಾಗಿದೆ ಎಂದು ಹೇಳಿದ್ದೀರಿ. ಯಾವಾಗ ಇದನ್ನು ಜಾರಿಗೆ ತರಲಾಯಿತು ಎಂಬುದನ್ನು ತಿಳಿಸಬೇಕು. ಎರಡನೆಯದಾಗಿ ಯಾವ ಯಾವ ಗುಂಪಿನ ಹುದ್ದೆಗಳಿಗೆ ಇದು ಪಾಲನೆಯಾಗಿದೆ ಎಂಬುದನ್ನು ಸ್ಪಷ್ಟವಾಗಿ ತಿಳಿಸಬೇಕು. 49 ಹುದ್ದೆಗಳಿಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ. ಈ ಪರಿಶೀಲನೆ ಎಷ್ಟು ಕಾಲ ನಡೆಯುತ್ತದೆ. ಪರಿಶೀಲನೆಗಾಗಿ ಸರ್ಕಾರಕ್ಕೆ ಯಾವಾಗ ಬಂತು, ಏತಕ್ಕೆ ತಡವಾಗಿದೆ ಎಂಬುದನ್ನು ತಿಳಿಸಬೇಕೆಂದು ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಮುಖ್ಯಮಂತ್ರಿಗಳ ಪರವಾಗಿ) : ಕೇಡರ್ ಆ್ಯಂಡ್ ರಿಕ್ರೂಟ್‌ಮೆಂಟ್ ರೂಲ್ಸ್ 1960 ರಿಂದ ಜಾರಿಗೆ ಬಂದಿದೆ. ಇದರಲ್ಲಿ ಒಟ್ಟಿಗೆ 227 ಹುದ್ದೆಗಳು ಇವೆ. ಇನ್ನು 49 ಹುದ್ದೆಗಳಿಗೆ ಕೇಡರ್ ಆ್ಯಂಡ್ ರಿಕ್ರೂಟ್‌ಮೆಂಟ್ ರೂಲ್ ಜಾರಿಗೆ ಬರಲಿಕ್ಕೆ ಇದೆ. ಅದು ಪರಿಶೀಲನೆಯಲ್ಲಿ ಇದೆ. ನಾವು ಇದನ್ನು ಬೇಗನೆ ಜಾರಿಗೆ ತರುತ್ತೇವೆ. ಅದೇ ರೀತಿ ಡೈರೆಕ್ಟರ್ ಆಫ್ ಹೆಲ್ತ್ ಆ್ಯಂಡ್ ಫ್ಯಾಮಿಲಿ ವೆಲ್‌ಫೇರ್ ಸರ್ವಿಸ್ 1965ರಲ್ಲಿ 44 ಹುದ್ದೆಗಳಿಗೆ ಕೇಡರ್ ರಿಕ್ರೂಟ್‌ಮೆಂಟ್ ರೂಲ್ಸ್ ಆಗಿದೆ. ಕರ್ನಾಟಕ ಮೆಡಿಕಲ್ ಡಿಪಾರ್ಟ್‌ಮೆಂಟ್ ಸರ್ವೀಸಸ್‌ಗೆ 1960ರಲ್ಲಿ ಆಗಿದೆ. ಕರ್ನಾಟಕ ಪಬ್ಲಿಕ್ ಹೆಲ್ತ್ ಸರ್ವಿಸಸ್ ಎಕ್ಸಿಕ್ಯೂಟಿವ್ ಆರ್ಡರ್ಸ್ 1960ರಲ್ಲಿ ಆಗಿದೆ. ನಾನು ಹೇಳಿದ ಹಾಗೆ ಅದೇ ರೀತಿ ಈ 49 ಹುದ್ದೆಗಳಿಗೆ ಬೇಗನೆ ಕೇಡರ್ ರಿಕ್ರೂಟ್‌ಮೆಂಟ್ ಜಾರಿಗೆ ತರುತ್ತೇವೆ. ಇದನ್ನೆಲ್ಲಾ ನಾವು ಮೂರು ಪುಸ್ತಕಗಳಲ್ಲಿ ಪ್ರಿಂಟ್ ಮಾಡಿ ನಮ್ಮ ಮಾನ್ಯ ಸದಸ್ಯರಿಗೆ ಕಳುಹಿಸಿ ಕೊಡುತ್ತೇವೆ. ಇದರಲ್ಲಿ ಯಾವುದೇ ವ್ಯತ್ಯಾಸ ಇದ್ದರೆ ದಯಮಾಡಿ ನಮಗೆ ಹೇಳಿದರೆ ನಾವು ಅದನ್ನು ಸರಿಪಡಿಸುತ್ತೇವೆ.

<u>ತಡೆ ಹಿಡಿಯಲಾದ ಚಿಕ್ಕೆ ಗುರುತಿನ ಪ್ರಶ್ನೆಗಳು</u>

<u>ವಿಷಯ : ಬೆಂಗಳೂರಿನ ಹಳೆಯ ತರಗು ಪೇಟೆಯ ಜಮೀನು ಆಸ್ಪತ್ರೆಗಾಗಿ ಸ್ವಾಧೀನ.</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 21 (163)
ಶ್ರೀ ಕೆ. ಲಕ್ಕಣ್ಣ (ರಾಜಾಜೀನಗರ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರ ಹಳೆಯ ತರುಗುಪೇಟೆ ಜಮೀನನ್ನು ವಿಕ್ಟೋರಿಯಾ ಆಸ್ಪತ್ರೆಗೆ ವಿಸ್ತರಿಸಲು ಸ್ವಾಧೀನ ಮಾಡಿಕೊಳ್ಳಲಾಗಿರುವುದೇ?
ಆ) ಹಾಗಿದ್ದಲ್ಲಿ ಎಷ್ಟು ಜಮೀನು ಸ್ವಾದೀನ ಪಡಿಸಿಕೊಳ್ಳಲಾಗಿದೆ ಹಾಗೂ ಎಷ್ಟು ಪರಿಹಾರ ಹಣವನ್ನು ಕೊಡಲಾಗಿದೆ?
ಇ) ಈ ಆಸ್ಪತ್ರೆ ವಿಸ್ತರಣಾ ಕಟ್ಟಡ ಕಟ್ಟಲು ನಕ್ಷೆ ಮಂಜೂರು ಮಾಡಲಾಗಿದೆಯೇ?
ಈ) ಹಾಗಿದ್ದಲ್ಲಿ ಅದರ ಕೆಲಸವನ್ನು ಯಾವಾಗ ಪ್ರಾರಂಭ ಮಾಡಲಾಗುವುದು?

ಶ್ರೀ ಜಿ. ರಾಮಕೃಷ್ಣ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) ಇಲ್ಲ. ವಿಕ್ಟೋರಿಯಾ ಆಸ್ಪತ್ರೆ ಆವರಣದಲ್ಲಿ ಮಹಾಯೋಜನಾದಡಿಯಲ್ಲಿ ತರಗುಪೇಟೆಯಿಂದ ಯಾವ ಜಮೀನನ್ನು ಆಸ್ಪತ್ರೆಯ ವಿಸ್ತರಣಾ ಸಲುವಾಗಿ ಸ್ವಾಧೀನಪಡಿಸಿಕೊಂಡಿಲ್ಲ.
ಆ) ವಿಕ್ಟೋರಿಯಾ ಆಸ್ಪತ್ರೆಯನ್ನು ವಿಸ್ತರಿಸುವ ಬಗ್ಗೆ ಹಳೆಯ ತರಗುಪೇಟೆ ಜಮೀನನ್ನು ಸ್ವಾಧೀನಪಡಿಸುವ ಪ್ರಸ್ತಾವನೆ ಇರುವುದಿಲ್ಲ. ಆದ್ದರಿಂದ ಜಮೀನು ಸ್ವಾಧೀನಪಡಿಸುವ ಹಾಗೂ ಪರಿಹಾರ ಮೊತ್ತವನ್ನು ಪಾವತಿ ಮಾಡುವ ಮತ್ತು ಕೆಲಸ ಪ್ರಾರಂಭ ಮಾಡುವ ಯೋಜನೆಯ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಕೆ. ಲಕ್ಕಣ್ಣ : ಮಾನ್ಯ ಅಧ್ಯಕ್ಷರೇ, ವಿಕ್ಟೋರಿಯಾ ಆಸ್ಪತ್ರೆಯಲ್ಲಿ ವಿಸ್ತರಣೆ-ಗೋಸ್ಕರ ಹಳೆಯ ತರಗು ಪೇಟೆಯ ಜಮೀನನ್ನು ಸ್ವಾಧೀನ ಮಾಡಿಕೊಳ್ಳುತ್ತೀರ ಎಂದು ಕೇಳಿದೆ. ಅದಕ್ಕೆ ಇಲ್ಲ, ಎಂದು ಹೇಳುತ್ತಿದ್ದಾರೆ . ಇದು ಸುಮಾರು 15 ವರ್ಷಗಳ ಹಿಂದೆಯೇ ತರಾವು ನಡೆದಿದೆ. ಹಿಂದಿನ ಮುಖ್ಯಮಂತ್ರಿಗಳಾಗಿದ್ದಂತಹ ದಿವಂಗತ ದೇವರಾಜ ಅರಸ್ ಅವರ ಕಾಲದಲ್ಲೇ ಇದನ್ನು ಸ್ವಾಧೀನ ಮಾಡಬೇಕು ಎಂದು ಆ ಸ್ಥಳವನ್ನು ಯಶವಂತಪುರಕ್ಕೆ ವರ್ಗಾವಣೆ ಮಾಡಲಾಗಿದೆ. ಆದರೆ ಅಧಿಕಾರಿಗಳು ತಪ್ಪು ತಿಳುವಳಿಕೆ ಕೊಡುತ್ತಿದ್ದಾರೆ. ಒಂದು ಲಕ್ಷ ಜನಸಂಖ್ಯೆ ಇದ್ದಾಗ ವಿಕ್ಟೋರಿಯಾ ಆಸ್ಪತ್ರೆ ಆಗಿದ್ದುದು. ಇವತ್ತು 45-50 ಲಕ್ಷ ಜನಸಂಖ್ಯೆಯಾಗಿದೆ. ಅದಕ್ಕೋಸ್ಕರ ಇದನ್ನು ವಿಸ್ತರಣೆ ಮಾಡಬೇಕು ಎಂದು ಇದೆ, ಇದರ ಬಗ್ಗೆ ತಪ್ಪು ತಿಳುವಳಿಕೆ ಕೊಟ್ಟಿದ್ದಾರೆ. ದಯವಿಟ್ಟು ಇದನ್ನು ಸ್ವಾಧೀನ ಮಾಡಿಕೊಂಡು ವಿಕ್ಟೋರಿಯ ಆಸ್ಪತ್ರೆ ವಿಸ್ತರಣೆಗೋಸ್ಕರ ಇರಬೇಕು ಎಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳನ್ನು ಕೇಳುತ್ತಿದ್ದೇನೆ.

ಶ್ರೀ ಜಿ. ರಾಮಕೃಷ್ಣ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದಂತೆ ನಾವು ಈ ಜಮೀನನ್ನು ಸ್ವಾಧೀನಪಡಿಸಿಕೊಂಡಿಲ್ಲ. ಇದನ್ನು ಸ್ವಾಧೀನ ಪಡಿಸಿಕೊಳ್ಳತಕ್ಕಂಥ ಅವಶ್ಯಕತೆಯೂ ಇಲ್ಲ ಎಂದು ನನಗೆ ಅನಿಸುತ್ತದೆ. ಏಕೆಂದರೆ ನಾವು ಈ ರೀತಿಯ ಪ್ರಪೋಸಲ್ಸ್ ಬಿಲ್ಡಪ್ ಮಾಡಿಲ್ಲ.

ಶ್ರೀ ಕೆ. ಲಕ್ಕಣ್ಣ : ಹಿಂದೆ ಈ ಮಂಡಿಪೇಟೆಯನ್ನು ಸ್ಥಳಾಂತರ ಮಾಡಿದ್ದುದು ಅದನ್ನು

ವಿಸ್ತರಣೆ ಮಾಡಬೇಕು ಎನ್ನುವ ಉದ್ದೇಶಕ್ಕಾಗಿ, ಇದರ ಪ್ರಸ್ತಾವನೆ ನಡೆಯುತ್ತಾ ಇತ್ತು . ಅದು ಮಧ್ಯದಲ್ಲಿ ನಿಂತುಹೋಯಿತು. ದಯವಿಟ್ಟು ಈ ಜಮೀನನ್ನು ಸ್ವಾಧೀನ ಮಾಡಿಕೊಂಡು ವಿಕ್ಟೋರಿಯ ಆಸ್ಪತ್ರೆ ವಿಸ್ತರಣೆ ಮಾಡಲೇ ಬೇಕು, ಇದು ಬಹಳ ಚಿಕ್ಕದಾಗಿದೆ. ಇವತ್ತು ಜನಸಂಖ್ಯೆ ಜಾಸ್ತಿಯಾಗಿ ಹಳ್ಳಿಗಳಿಂದ ಹೋರ ರೋಗಿಗಳು ಬರುತ್ತಿದ್ದಾರೆ . ಒಳರೋಗಿಗಳಿಲ್ಲಾ ಆಚೆ ಕೆಳಗಡೆ ಮಲಗುತ್ತಿದ್ದಾರೆ. ಅವರಿಗೆ ಕೊಠಡಿಗಳು ಇಲ್ಲ, ಹಾಸಿಗೆಗಳು ಇಲ್ಲ. ಆ ದೃಷ್ಟಿಯಿಂದಲಾದರೂ ಅದನ್ನು ಸ್ವಾಧೀನಮಾಡಿಕೊಂಡು ವಿಸ್ತರಣೆ ಮಾಡಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಜಿ. ರಾಮಕೃಷ್ಣ : ಆ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳತಕ್ಕಂತಹ ಕ್ರಮವನ್ನು ನಾವು ಯಾವತ್ತೂ ತೆಗೆದುಕೊಂಡಿಲ್ಲ. ತಾವು ಅದನ್ನು ಸ್ವಾಧೀನ ಪಡಿಸಿಕೊಳ್ಳುವುದು ಸೂಕ್ತ ಇದೆ ಎಂದರೆ ಅದರ ಬಗ್ಗೆ ಪರಿಶೀಲನೆ ಮಾಡಿ ನೋಡುತ್ತೇನೆ.

ಶ್ರೀ ಎಸ್. ರಮೇಶ್ : ಹಿಂದೆ ಒಂದು ಸಮಯದಲ್ಲಿ ಅದನ್ನು ಸ್ವಾಧೀನ ಪಡಿಸಿಕೊಳ್ಳಬೇಕು ಎಂದು ಹೇಳಿದ್ದರು. ಆ ವಿಚಾರವಾಗಿ ನಾನು ಸಂಬಂಧಪಟ್ಟ ಮಂತ್ರಿಗಳಿಗೆ ಕೇಳಿದ್ದೆ. ಕಾರ್ಮಿಕ ನಗರವಾದಂಥ ಬೆಂಗಳೂರಿನಲ್ಲಿ ಇದು ದೊಡ್ಡ ಆಸ್ಪತ್ರೆಯೆಂದು ಹೇಳುತ್ತಾರೆ, ಆದರೆ ರೋಗಿಗಳನ್ನು ಕೆಳಗಡೆ ಮಲಗಿಸುತ್ತಿದ್ದಾರೆ. ಇನ್ನು ಸ್ವಾಧೀನ ಪಡಿಸಿ ಕೊಳ್ಳುತ್ತೇವೆ ಎಂದರೆ ಎಷ್ಟು ದಿವಸದಲ್ಲಿ ಸ್ವಾಧೀನ ಪಡಿಸಿಕೊಳ್ಳುತೀರಿ ಎಂದು ಹೇಳಿ. ಪರಿಶೀಲಿಸುತ್ತೇವೆ, ನೋಡುತ್ತೇವೆ, ಮಾಡುತ್ತೇವೆ ಎಂದು ಹೇಳಿದರೆ ಹೇಗೆ? ನೀವು ಯಾವಗಲಾದರೂ ಮೇಜರ್ ಆಕ್ಸಿಡೆಂಟ್ಸ್ ಆದಾಗ ದಯವಿಟ್ಟು ವಿಕ್ಟೋರಿಯಾ ಆಸ್ಪತ್ರೆಗೆ ಭೇಟಿ ಕೊಟ್ಟು ನೋಡಿ. ಡೆಡ್ ಬಾಡಿಯಿಂದ ಹಿಡಿದು ಪೇಷಂಟ್‌ವರೆಗೂ ಹೇಗೆ ಇಟ್ಟಿರುತ್ತಾರೆ ಎಂದು ತಿಳಿಯುತ್ತದೆ. ದಯವಿಟ್ಟು ಈ ವಿಚಾರವನ್ನು ಪರಿಶೀಲಿಸಿ ಎಂದು ಹೇಳುತ್ತೇನೆ.

ಶ್ರೀ ಜಿ. ರಾಮಕೃಷ್ಣ: ಈಗಾಗಲೇ ಹೇಳಿದ್ದೇನೆ, ಆ ಜಮೀನು ನಮಗೆ ಬಹಳ ಅವಶ್ಯಕತೆ ಇದ್ದು ತೆಗೆದುಕೊಳ್ಳಬೇಕು ಎಂದು ಮನದಟ್ಟು ಆದರೆ ಅದನ್ನು ಸ್ವಾಧೀನ ಪಡಿಸಿಕೊಳ್ಳುವುದಕ್ಕೆ ನಾವು ಪರಿಶೀಲನೆ ಮಾಡುತ್ತೇವೆ.

ವಿಷಯ : ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಹೆಚ್ಚುವರಿ ಪ್ರವೇಶ.

434

ಶ್ರೀ ಪಿ.ಜಿ.ಆರ್. ಸಿಂಧ್ಯ(ಕನಕಪುರ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. 1991-92 ಹಾಗೂ 1992-93ನೇ ಸಾಲುಗಳಲ್ಲಿ ರಾಜ್ಯದ ವಿವಿಧ ವೈದ್ಯಕೀಯ ಕಾಲೇಜುಗಳಲ್ಲಿ ಸರ್ಕಾರ ನಿಗಧಿ ಮಾಡಿದ ಸಂಖ್ಯೆಗಿಂತ ಹೆಚ್ಚುವರಿ ಪ್ರವೇಶವನ್ನು ಪ್ರಥಮ ಎಂ.ಬಿ.ಬಿ.ಎಸ್‌ನಲ್ಲಿ ಯಾರಾದರೂ ಮಾಡಿರುವರೇ?
2. ಈ ಪ್ರವೇಶವನ್ನು ಮಾಡುವಾಗ ವಿಶ್ವ ವಿದ್ಯಾನಿಲಯಗಳು ಮತ್ತು ಸರ್ಕಾರದವರು ಒಪ್ಪಿಗೆ ಕೊಟ್ಟಿರುವರೇ?
3. ಹೀಗೆ ಪ್ರವೇಶ ಮಾಡಿದ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಕುಳಿತುಕೊಳ್ಳಲು ಸರ್ಕಾರ ಅನುಮತಿ ನೀಡಿರುವುದೇ?